ಯಂತ್ರ ಸಜ್ಜಿತ ದೋಣಿಯನ್ನು ಒದಗಿಸುವುದು

264 (650) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ): ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ, ಮೀನುಗಾರಿಕೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿಯ ಹಿನ್ನೀರಿನಿಂದ ಜಮಖಂಡಿ ತಾಲ್ಲೂಕಿನ ತಟದ ಗ್ರಾಮವಾದ ಜಂಬಗಿ (KD) ಗ್ರಾಮಕ್ಕೆ ಸುಸಜ್ಜಿತ ಯಾಂತ್ರಿಕ ದೋಣಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಪ್ರಯಾಣಿಕರ ಅನುಕೂಲಕ್ಕಾಗಿ ಹೊಸದಾದ 100 ಜನರನ್ನು ಸಾಗಿಸಬಹುದಾದ ಯಂತ್ರ ಸಜ್ಜಿತ ದೋಣಿಯನ್ನು ತಕ್ಷಣವೇ ಒದಗಿಸಲಾಗುವುದೇ ; (ವಿವರ ನೀಡುವುದು) ?

ಶ್ರೀ ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ, ಮೀನುಗಾರಿಕೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):

ಅ) ಹೌದು.

ಆ) ಪ್ರಸಕ್ತ ಸದರಿ ಕಡವಿಗೆ ತಹಶೀಲ್ದಾರ್ ಜಮಖಂಡಿ ಇವರು ಪ್ರವಾಹ ನಿಯಂತ್ರಣಕ್ಕಾಗಿ ಕಾಯ್ದಿರಿಸಲಾಗಿದ್ದ ಒಂದು ಫೈಬರ್ ಯಾಂತ್ರಿಕ ನಾವೆಯನ್ನು ಅಲ್ಲಿಗೆ ಸಧ್ಯಕ್ಕೆ ಒದಗಿಸಲಾಗಿದೆ.

ರಸ್ತೆಗಳನ್ನು ದುರಸ್ತಿಪಡಿಸುವುದು

265 (578) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ರಸ್ತೆಗಳು ಭಾರೀ ಮಳೆಗೆ ಹಾಳಾಗಿ ಗುಂಡಿಗಳಾಗಿದ್ದು ಸಾರ್ವಜನಿಕರಿಗೆ ಓಡಾಡಲು ತುಂಬಾ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಅದನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):

ಅ) ತುರುವೇಕೆರೆ ತಾಲ್ಲೂಕಿನಲ್ಲಿ 2010ನೇ ಸಾಲಿನಲ್ಲಿ ಉಂಟಾದ ಅಕಾಲಿಕ ಹೆಚ್ಚುವರಿ ಮಳೆಯಿಂದ ತುರುವೇಕೆರೆ ತಾಲ್ಲೂಕಿನ ಲೋಕೋಪಯೋಗಿ ವ್ಯಾಪ್ತಿಯ ಕೆಲವು ರಸ್ತೆಗಳಲ್ಲಿನ ಹಲವು ಭಾಗಗಳ ಸರಪಳಿಗಳಲ್ಲಿ ಗುಂಡಿಗಳಾಗಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇವುಗಳನ್ನು ದುರಸ್ತಿಗೊಳಿಸಲು 2010–11ನೇ ಸಾಲಿಗೆ ಸರ್ಕಾರವು ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿದೆ.

1. 3054–ಯೋಜನೆ ರಾಜ್ಯ ಹೆದ್ದಾರಿ ನಿರ್ವಹಣೆಗೆ ರೂ. 21.38 ಲಕ್ಷ.
2. 3054–ಯೋಜನೇತರ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗೆ ರೂ. 105.54 ಲಕ್ಷ.
3. 8443–ಪ್ರಕೃತಿ ವಿಕೋಪ ಯೋಜನೆಯಡಿಯಲ್ಲಿ ರೂ. 8.00 ಲಕ್ಷ.

ಬಿಡುಗಡೆಯಾಗಿರುವ ಒಟ್ಟು ಅನುದಾನ ರೂ. 134.92 ಲಕ್ಷಗಳಲ್ಲಿ ಒಟ್ಟಾರೆ 333.70 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಗುಂಡಿ ಮುಚ್ಚಲು ಯೋಜಿಸಿದ್ದು, ಇದರಲ್ಲಿ 25 ಕಿ.ಮೀ. ಉದ್ದದ ರಸ್ತೆಯಲ್ಲಿ ಗುಂಡಿ

ಮುಚ್ಚಲಾಗಿದೆ. ಅದೇ ರೀತಿ 41.20 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ರಸ್ತೆಯಲ್ಲಿ ಗುಂಡಿ ಮುಚ್ಚಲು ಯೋಜಿಸಿದ್ದು, ಇದರಲ್ಲಿ 20.00 ಕಿ.ಮೀ. ಉದ್ದದ ರಸ್ತೆಯಲ್ಲಿ ಗುಂಡಿ ಮುಚ್ಚಲಾಗಿದೆ. ಉಳಿದಂತೆ ವಿವಿಧ ಸ್ಥಳಗಳಲ್ಲಿ ಗುಂಡಿ ಮುಚ್ಚುವ ಕಾರ್ಯ ಪ್ರಗತಿಯಲ್ಲಿದೆ.

ಮಾರ್ಚ್ 2011ರ ಅಂತ್ಯಕ್ಕೆ ಎಲ್ಲಾ ದುರಸ್ತಿ ಕೆಲಸ ಪೂರ್ಣಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ಅರ್ಬನ್ ಗೃಹ ನಿರ್ಮಾಣ ಸಹಕಾರ ಸಂಘ ಕುರಿತು

266 (633) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ): ಮಾನ್ಯ ಸಹಕಾರ, ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಅರ್ಬನ್ ಗೃಹ ನಿರ್ಮಾಣ ಸಹಕಾರ ಸಂಘ, ಬಸವೇಶ್ವರನಗರ ಇದರ ಲೆಕ್ಕಪರಿಶೋಧನೆ ಇಲಾಖಾ ವತಿಯಿಂದ ನಡೆಯುತ್ತಿದೆಯೇ ;

ಆ) ಹಾಗಿದ್ದಲ್ಲಿ, ಲೆಕ್ಕಪರಿಶೋಧನೆಯನ್ನು ಯಾವ ವರ್ಷದವರೆಗೆ ಮಾಡಲಾಗಿದೆ ; (ಮಾಹಿತಿ ನೀಡುವುದು)

ಇ) ಈ ಸಂಸ್ಥೆಗೆ ಚುನಾಯಿತ ಆಡಳಿತ ಮಂಡಳಿ ಅಸ್ಥಿತ್ವದಲ್ಲಿದೆಯೇ ;

ಈ) ಈ ಸಂಸ್ಥೆ ಬಡಾವಣೆ ನಿರ್ಮಾಣ ಮಾಡಿರುವ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು ;

ಉ) ನಿವೇಶನ ಹಂಚಿರುವ ಸದಸ್ಯರ ಸಂಖ್ಯೆ ಎಷ್ಟು ; ನಿವೇಶನಗಳನ್ನು ನಿಯಮಾನುಸಾರ ಜೇಷ್ಠತೆಗೆ ಅನುಗುಣವಾಗಿ ಹಂಚಿಕೆ ಮಾಡಲಾಗಿದೆಯೇ ; (ಮಾಹಿತಿ ನೀಡುವುದು) ?